ಕೊಡಗು	02
ಕೋಲಾರ	25
ಕೊಪ್ಪಳ	17
ಮೈಸೂರು	22
ಮಂಡ್ಯ	36
ರಾಯಚೂರು	21
ಶಿವಮೊಗ್ಗ	01
ತುಮಕೂರು	05
ಉತ್ತರ ಕನ್ನಡ	01
ಉಡುಪಿ	0
ಚಿಕ್ಕಬಳ್ಳಾಪುರ	04
ರಾಮನಗರ	14
ಒಟ್ಟು	**520**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಮತ್ತು ಅಲ್ಪ ಸಂಖ್ಯಾತ ವಿದ್ಯಾರ್ಥಿಗಳು

914 (1139) ಶ್ರೀ ರಾಜು.ಕೆ. (ರಾಮನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ವತಿಯಿಂದ ನಡೆಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಮತ್ತು ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ನೀಡುತ್ತಿರುವ ಮೊತ್ತ ಎಷ್ಟು; (ವಿವರಗಳನ್ನು ನೀಡುವುದು);

ಆ) ಪ್ರಸ್ತುತ ನೀಡುತ್ತಿರುವ ಮೊತ್ತವು ವಿದ್ಯಾರ್ಥಿಗಳಿಗೆ ಸಾಲದ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಮೊತ್ತವನ್ನು ಹೆಚ್ಚಿಸಲಾಗುವುದು ಹಾಗೂ ಯಾವ ಸಾಲಿನಿಂದ ಜಾರಿಗೆ ತರಲಾಗುವುದು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಸರ್ಕಾರದ ವತಿಯಿಂದ ನಡೆಸುತ್ತಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಅಲ್ಪ ಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮಾಸಿಕ ರೂ.600/– ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮಾಸಿಕ ರೂ.650/– ಆಹಾರ ವೆಚ್ಚ ಮಾಡಲಾಗುತ್ತದೆ. ಇದಲ್ಲದೆ, –

1. ಸೋಪು, ಎಣ್ಣೆ, ಪೇಸ್ಟ್ ಇತ್ಯಾದಿ – ಮಾಸಿಕ ರೂ.40/–
2. ಪಥ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ(ವಾರ್ಷಿಕ ರೂ.250/–)
3. ಆಯುಷ್ಕರ್ಮ – ವಾರ್ಷಿಕ ರೂ.60/–)
4. ಸಮವಸ್ತ್ರ – ವಾರ್ಷಿಕ ರೂ.500/–
5. ಹಾಸಿಗೆ ಹೊದಿಕೆ – ರೂ.400/–(3 ವರ್ಷಕ್ಕೆ ಒಮ್ಮೆ)

ಆ) ಹೌದು.

ಇ) ಹೌದು.

ಈ) 2010 ಮತ್ತು 2011 ನೇ ಸಾಲಿನಿಂದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳ ಭೋಜನ ವೆಚ್ಚವನ್ನು ಅನುಕ್ರಮವಾಗಿ ಮಾಸಿಕ ರೂ.600/– ರಿಂದ ರೂ.650/–ಕ್ಕೆ ಹಾಗೂ ರೂ.650/– ರಿಂದ ರೂ.750/–ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ.

ಅಂಗವಿಕಲರಿಗೆ ನೀಡುತ್ತಿರುವ ತ್ರಿಚಕ್ರ ಮೋಟಾರು ಸೈಕಲ್ ವಿತರಣೆ

915 (1423) ಶ್ರೀ ರಾಜು ಕೆ (ರಾಮನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅಂಗವಿಕಲರಿಗೆ ನೀಡುತ್ತಿರುವ ತ್ರಿಚಕ್ರ ಮೋಟಾರು ಸೈಕಲ್ ವಿತರಣೆಯನ್ನು ಸಮರ್ಪಕವಾಗಿ ನೀಡಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ತ್ರಿಚಕ್ರವಾಹನ ಗಳಿಗಾಗಿ ಅರ್ಜಿ ಸಲ್ಲಿಸಿರುವ ಅಂಗವಿಕಲರುಗಳ ಸಂಖ್ಯೆ ಎಷ್ಟು? (ತಾಲ್ಲೂಕು ಮತ್ತು ಜಿಲ್ಲಾವಾರು ವಿವರಗಳನ್ನು ನೀಡುವುದು);